


ಸುರತ್ಕಲ್ ಎನ್‌ಐಟಿಕೆಯ ಎಲ್ಲ ಬೋಧಕ ಮತ್ತು ಸಿಬ್ಬಂದಿ ವಸತಿ ಗೃಹಗಳಿಗೆ ಕೊಳವೆ ಮೂಲಕ ಅನಿಲ ಪೂರೈಕೆ ಬಗ್ಗೆ ಗೇಲ್ ಇಂಡಿಯಾ ಲಿ. ಮತ್ತು ಎನ್‌ಐಟಿಕೆ ಮಧ್ಯೆ ಒಡಂಬಡಿಕೆಗೆ ಸಹಿ ಹಾಕಲಾಯಿತು. ಗೇಲ್ ಮಂಗಳೂರು ಪೆಟ್ರೋಕೆಮಿಕಲ್ಸ್‌ನ ಸಿಇಒ ಸುಧೀರ್ ಕುಮಾರ್, ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ. ರವಿ, ಗೇಲ್‌ನ ಜಿಎಂ ಸಿಜಿಡಿ ಪ್ರಾಜೆಕ್ಟ್ ಸಾಯಿ ಕುಮಾರ್ ಸಹಿ ಹಾಕಿದರು. ಎನ್‌ಐಟಿಕೆಯ ಡೀನ್‌ಗಳಾದ ಪ್ರೊ. ಕೆ. ವಿ. ಗಂಗಾಧರನ್, ಪ್ರೊ.ಉದಯ ಭಟ್, ಪ್ರೊ. ದ್ವಾರಕೇಶ್, ಪ್ರೊ.ಶ್ರೀಕಾಂತ್ ಎಸ್. ರಾವ್, ಜಂಟಿ ರಿಜಿಸ್ಟ್ರಾರ್ ರಾಮ್ ಮೋಹನ್, ಧರ್ಮೇಂದ್ರ ಕುಮಾರ್ ಮತ್ತಿತರರಿದ್ದರು.

Vijaya karnataka, Date:17/05/24, P, no-01